ಉತ್ತರ

ಅ) ಹೌದು.

ಆ) ಜೈಲು ನಿವೇಶನದ ಸುತ್ತಲೂ ಆವರಣ ಗೋಡೆ ನಿರ್ಮಾಣ ಮಾಡಲು ಲೋಕೋಪಯೋಗಿ ಇಲಾಖೆ ಅಭಿಯಂತರರು ರೂ.9.00 ಲಕ್ಷದ ಅಂದಾಜನ್ನು ತಯಾರಿಸಿದ್ದಾರೆ. ಅನುದಾನದ ಕೊರತೆಯಿಂದಾಗಿ ಸದರಿ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ಅನುದಾನ ಲಭ್ಯವಾದ ನಂತರ ಕ್ರಮ ಕೈಗೊಳ್ಳಲಾಗುವುದು.

ಇ) ಹೆಚ್ಚುವರಿ ನೀರು ಸರಬರಾಜಿಗಾಗಿ ಒಂದು ಕೊಳವೆ ಬಾವಿ ಕೊರೆಯಿಸಿ ಪಂಪ್‌ಸೆಟ್ ಅಳವಡಿಸಲು ಲೋಕೋಪಯೋಗಿ ಇಲಾಖೆ ಅಭಿಯಂತರರು ರೂ.6.43 ಲಕ್ಷಗಳಿಗೆ ಅಂದಾಜನ್ನು ತಯಾರಿಸಿದ್ದಾರೆ. ಅನುದಾನ ಲಭ್ಯವಾದ ನಂತರ ಕ್ರಮ ಕೈಗೊಳ್ಳಲಾಗುವುದು.

ಈ) ಕಾರಾಗೃಹದ ಕಟ್ಟಡ ನವೀಕರಿಸುವುದು ಹಾಗೂ ಪಾಂಬರೀಕರಣ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯವರು ರೂ.16.78 ಲಕ್ಷಗಳ ಅಂದಾಜನ್ನು ತಯಾರಿಸಿದ್ದಾರೆ. ಅನುದಾನ ಲಭ್ಯವಾದ ನಂತರ ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ಉತ್ಪಾದನೆ ಮತ್ತು ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 962(1505)

ಸದಸ್ಯರ ಹೆಸರು: ಶ್ರೀ ಕೃಷ್ಣಮೂರ್ತಿ.ಕೆ.ಎಂ(ಕಡೂರು)

ಪ್ರಶ್ನೆ

ಅ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು 1999-2000, 2000-2001 ಮತ್ತು 2001-2002ನೇ ಸಾಲಿನಲ್ಲಿ (31-1-2001ರ) ಎಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಿ ವಿದ್ಯುತ್ ಪ್ರಸರಣಾ ನಿಗಮಕ್ಕೆ ನೀಡಿದೆ?

ಆ) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ಕರ್ನಾಟಕ ವಿದ್ಯುತ್ ನಿಗಮ ಮತ್ತು ಇತರೆ ಮೂಲಗಳಿಂದ ಪಡೆದಿರುವ ವಿದ್ಯುತ್ ಎಷ್ಟು? ವಿವರಗಳನ್ನು ನೀಡುವುದು?

ಇ) ಹೀಗೆ ಪಡೆದಿರುವ ವಿದ್ಯುತ್‌ನಲ್ಲಿ ಸರಬರಾಜಿನ ನಷ್ಟ ಎಷ್ಟಾಗಿದೆ? ಇದನ್ನು ತಡೆಯುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಉತ್ತರಿಸುವ ಸಚಿವರು: ಶ್ರೀ ವೀರಣ್ಣಮಾರ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕಳೆದ ಸಾಲಾದ 1999-2000, 2000-2001ರಲ್ಲಿ ಉತ್ಪಾದಿಸಿದ ವಿದ್ಯುತ್‌ನ ಪ್ರಮಾಣ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಉತ್ಪಾದಿಸಿದ ವಿದ್ಯುತ್‌ನ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ)
1.	1999-2000	19473
2.	2000-2001	19445
3.	2001-2002	12948
	(ಡಿಸೆಂಬರ್ 2001ರ ಅಂತ್ಯದವರೆಗೆ)	

ಆ) ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ಮೇಲ್ಕಂಡ ಅವಧಿಯಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ಇತರೆ ಮೂಲಗಳಿಂದ ಪಡೆದಿರುವ ವಿದ್ಯುತ್‌ನ ವರ್ಷವಾರು ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಮೂಲಗಳು	ವರ್ಷ		
		1999-00	2000-01	2001-02
1	2	3	4	5
1.	ಕ.ವಿ. ನಿಗಮದಿಂದ	18658	18560	13012
2.	ಪಿ.ಪಿ.ಪಿ. ಯಿಂದ	1109	912	746
3.	ನೆರೆ ರಾಜ್ಯಗಳಿಂದ	828	801	683
4.	ಕೇಂದ್ರ ಸ್ಥಾವರದಿಂದ ರಾಜ್ಯದ ಪಾಲು	5229	5820	4671

5. ಖಾಸಗಿ ಕ್ಷೇತ್ರದಿಂದ	294	1607	2081
6. ಪವರ್ ಟ್ರೇಡಿಂಗ್ ಕಾರ್ಪೊರೇಷನ್	-	-	140
ಒಟ್ಟು	26118	27700	21252

(ದ. ಲಕ್ಷ ಯೂನಿಟ್‌ಗಳಲ್ಲಿ)

ಇ) ವಿದ್ಯುತ್ ಸಾಗಣೆ ಮತ್ತು ವಿತರಣೆಯಲ್ಲಿನ ನಷ್ಟ ಕೆಳಕಂಡಂತಿದೆ.

ಕ್ರ. ಸಂ.	ವರ್ಷ	ಶೇಕಡಾವಾರು ನಷ್ಟ
1.	1999-2000	38
2.	2000-2001	35.5
3.	2001-2002	ಈ ಮಾಹಿತಿ ಈಗಲೇ ಲಭ್ಯವಿರುವುದಿಲ್ಲ

ವಿದ್ಯುತ್ ಸಾಗಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ತಡೆಗಟ್ಟಲು ನಿಗಮವು ಕೆಳಕಂಡ ಕ್ರಮಗಳನ್ನು ಪ್ರತಿವರ್ಷವೂ ಕೈಗೊಳ್ಳುತ್ತದೆ.

1. ಹೊಸ ವಿದ್ಯುತ್ ಸ್ವೀಕರಣ ಕೇಂದ್ರಗಳ ಸ್ಥಾಪನೆ.

2. ಹೊಸ ವಿದ್ಯುತ್ ವಿತರಣಾ ಕೇಂದ್ರಗಳ ಸ್ಥಾಪನೆ.

3. ಈಗಿರುವ ವಿದ್ಯುತ್ ಕೇಂದ್ರದ ಸಾಮರ್ಥ್ಯವನ್ನು ಅಗತ್ಯವಿರುವ ಕಡೆ ಹೆಚ್ಚಳಗೊಳಿಸುವುದು.

4. ವಿದ್ಯುತ್ ಉಪ ಕೇಂದ್ರಗಳಲ್ಲಿ ಮತ್ತು 11 ಕೆ.ವಿ. ಮಾರ್ಗಗಳಲ್ಲಿ ಕೆಪಾಸಿಟರುಗಳನ್ನು ಅಳವಡಿಸುವುದು.

5. ವಿತರಣಾ ಮಾರ್ಗಗಳನ್ನು ಬಲಪಡಿಸುವುದು.

6. ಹೊಸದಾಗಿ 11 ಕೆವಿ ಎಕ್ಸ್‌ಪ್ರೆಸ್ ಮಾರ್ಗಗಳನ್ನು ನಿರ್ಮಿಸುವುದು.

7. ನೂತನವಾಗಿ ಹಾಗೂ ಹೆಚ್ಚುವರಿಯಾಗಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದು ಇವೇ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೆ ಈ ದಿಸೆಯಲ್ಲಿ ನಿಗಮದಲ್ಲಿ ಹತ್ತು ವರ್ಷಕ್ಕೆ ಒಂದು ಸಮಗ್ರ ಯೋಜನೆಯನ್ನು ರೂಪಿಸಿದ್ದು, ಇದರಂತೆ ರಾಜ್ಯಾದ್ಯಂತ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸುಮಾರು 13,600 ಕೋಟಿ ರೂಪಾಯಿಗಳ ವೆಚ್ಚವನ್ನು ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈ ಕಾರ್ಯಗಳನ್ನು ಸರ್ಕಾರದಿಂದ ಅನುಮೋದಿಸಲ್ಪಟ್ಟಿರುವ ಫೈನಾನ್ಷಿಯಲ್ ರೀಸ್ಟ್ರಕ್ಚರಿಂಗ್ ಪ್ಲಾನ್(ಎಫ್‌ಆರ್‌ಪಿ) ಪ್ರಕಾರ ಆದ್ಯತೆಗಳ ಅನುಸಾರ ಕಾಮಗಾರಿಗಳನ್ನು ಹಂತ ಹಂತವಾಗಿ ಹಣಕಾಸಿನ ಲಭ್ಯತೆಗನುಗುಣವಾಗಿ ಜಾರಿಗೊಳಿಸುವ ಗುರಿಯನ್ನು ಹೊಂದಲಾಗಿದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸ್ಥಗಿತ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 963(1506)

ಸದಸ್ಯರ ಹೆಸರು: ಶ್ರೀ ಕೃಷ್ಣಮೂರ್ತಿ.ಕೆ.ಎಂ(ಕಡೂರು)

ಪ್ರಶ್ನೆ

ಅ) ರಾಜ್ಯದಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸ್ಥಗಿತಗೊಳಿಸಲಾಗುತ್ತಿದೆ. ನಗರ ಇತರ ಗ್ರಾಮಾಂತರ ಪ್ರದೇಶಗಳಲ್ಲಿ ದಿನಕ್ಕೆ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸ್ಥಗಿತಗೊಳಿಸಲಾಗುತ್ತದೆ?

ಆ) ಗ್ರಾಮಾಂತರ ಪ್ರದೇಶಗಳಲ್ಲಿ ದಿನಪೂರ್ತಿ ವಿದ್ಯುತ್ ವಿತರಣೆಯಾಗದೇ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು?

ಇ) ಗ್ರಾಮಾಂತರ ಪ್ರದೇಶದ ಜನತೆಗೆ ಸರ್ಕಾರವು ತೋರುತ್ತಿರುವ ಮಲತಾಯಿ ಧೋರಣೆ ಸರಿಯೇ? ಈ ಧೋರಣೆಯನ್ನು ಸರಿಪಡಿಸಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮ ಏನು?

ಉತ್ತರಿಸುವ ಸಚಿವರು: ಶ್ರೀ ವೀರಕುಮಾರ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಉತ್ತರ

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ 11 ಕೆ.ವಿ. ಫೀಡರ್‌ಗಳ ಮೇಲೆ ಈ ಕೆಳಕಂಡಂತೆ